ಬೆಂಗಳೂರು ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ

62(165): ಶ್ರೀ ನೆ. ಲ. ನರೇಂದ್ರಬಾಬು. (ಮಹಾಲಕ್ಷ್ಮೀ ಲೇಔಟ್): ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಶಾಸನ ರಚನೆ, ನಗರಾಭಿವೃದ್ಧಿ ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಆ) ಬೆಂಗಳೂರು ಮಹಾನಗರದಲ್ಲಿ ಮುಂಬರುವ ಬೇಸಿಗೆಯಲ್ಲಿ ನೀರಿನ ತೊಂದರೆಯನ್ನು ನಿವಾರಿಸಲು ಸರ್ಕಾರ ಯಾವ ಯಾವ ಯೋಜನೆಯನ್ನು ಹಮ್ಮಿಕೊಂಡಿದೆ? (ಯೋಜನಾವಾರು ವಿವರ ನೀಡುವುದು);

ಇ) ಮಹಾಲಕ್ಷ್ಮೀ ಬಡಾವಣೆ ಕ್ಷೇತ್ರದಲ್ಲಿ ಕುಡಿಯುವ ನೀರನ್ನು ತಿಪ್ಪಗೊಂಡನಹಳ್ಳಿಯಿಂದಲೇ ಸಂಪೂರ್ಣವಾಗಿ ಸರಬರಾಜು ಮಾಡಲಾಗುತ್ತಿದ್ದು ಈ ಕೆರೆಯಲ್ಲಿ ದಿನದಿಂದ ದಿನಕ್ಕೆ ನೀರಿನ ಮಟ್ಟ ಕೆಳಗೆ ಇಳಿಯುತ್ತಿರುವುದರಿಂದ, ಬದಲಿ ವ್ಯವಸ್ಥೆಯಲ್ಲಿ ನೀರನ್ನು ಸರಬರಾಜು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು? (ವಿವರವಾದ ಮಾಹಿತಿ ಒದಗಿಸುವುದು);

ಈ) ತಿಪ್ಪಗೊಂಡನಹಳ್ಳಿ ಕೆರೆಗೆ ಬೇಸಿಗೆಯಲ್ಲಿ ಕಾವೇರಿ ನೀರನ್ನು ಹರಿಸಲು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಶಾಸನ ರಚನೆ, ನಗರಾಭಿವೃದ್ಧಿ ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು);

ಅ) ಬೆಂಗಳೂರು ನಗರಕ್ಕೆ ನೀರಿನ ಸೌಲಭ್ಯವನ್ನು ಉತ್ತಮಪಡಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

1. ನಗರದಲ್ಲಿ ಹಾಲಿ ಚಾಲ್ತಿಯಲ್ಲಿದ್ದ 5,962 ವಿದ್ಯುತ್ ಚಾಲಿತ 3818 ಕೈ ಚಾಲಿತ ಯಂತ್ರ ಕೊಳವೆ ಬಾವಿಗಳ ಜೊತೆಗೆ ಹೊಸದಾಗಿ 2,619 ಕೊಳವೆ ಬಾವಿಗಳನ್ನು ಕೊರೆದು ಇವುಗಳಿಂದ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.

2. 30x40 ಅಳತೆಯುಳ್ಳ ನಿವೇಶನಗಳಲ್ಲಿ ನಿರ್ಮಿಸುವ ಹೊಸಕಟ್ಟಡಗಳಿಗೆ ಮಳೆ ನೀರು ಕೊಯ್ಲು ಪದ್ಧತಿ ಅಳವಡಿಸುವುದು ಕಡ್ಡಾಯ ಮಾಡಲಾಗಿದೆ. ಇದೇ ರೀತಿ 40x60 ನಿವೇಶನಗಳಲ್ಲಿ ಹಾಲಿ ಇರುವ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ಪದ್ಧತಿ ಅಳವಡಿಸುವುದು ಕಡ್ಡಾಯ ಮಾಡಲಾಗಿದೆ.

3. ನಗರಕ್ಕೆ ದಿನಂಪ್ರತಿ ಹೆಚ್ಚುವರಿಯಾಗಿ 500 ದಶಲಕ್ಷ ಲೀಟರ್ ಕಾವೇರಿ ನೀರನ್ನು ತರಲು ಕಾವೇರಿ 4ನೇ ಹಂತ ಎರಡನೇ ಘಟ್ಟ ಯೋಜನೆ ರೂಪಿಸಿದ್ದು, ಈ ಯೋಜನೆಯು 31.03.2012ರ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

4. ಜೆ.ಐ.ಸಿ.ಎ.ಸಂಸ್ಥೆಯ ನೆರವಿನೊಂದಿಗೆ ಕಾವೇರಿ 4ನೇ ಹಂತ, 2ನೇ ಘಟ್ಟ ಯೋಜನೆಯಡಿ ನಗರದ ದಕ್ಷಿಣ ವಿಭಾಗದ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ನೀರು ಕೊಳವೆಗಳನ್ನು ಹಾಗೂ ಸಂಪರ್ಕಗಳನ್ನು ಬದಲಾಯಿಸಿ ನವೀಕರಿಸುವ ಕಾರ್ಯಕ್ಕೆ ದರಖಾಸ್ತು ಪ್ರಕ್ರಿಯೆ ನಡೆಯುತ್ತಿರುತ್ತದೆ. ಈ ಕ್ರಮದಿಂದ ನೀರು ಪೋಲಾಗುವುದನ್ನು ಸಮಗ್ರವಾಗಿ ನಿಯಂತ್ರಿಸಲಾಗುವುದು.

5. ವಾಣಿಜ್ಯ ಸಂಕೀರ್ಣ ಬಹುಮಹಡಿ ಗೃಹ ಸಮುಚ್ಛಯ ಬೃಹತ್ ಕಟ್ಟಡಗಳಿಗೆ ಹೊಸ ನೀರಿನ ಸಂಪರ್ಕ ಮಂಜೂರು ಮಾಡುವ ಸಮಯದಲ್ಲಿ ಒಳಚರಂಡಿ ನೀರು ಸಂಸ್ಕರಣಾ ಘಟಕ ಸ್ಥಾಪಿಸಿರುವುದನ್ನು ಕಡ್ಡಾಯ ಮಾಡಲಾಗಿದೆ.

6. ನಗರದ ಹೊರ ವಲಯದಲ್ಲಿರುವ ಕೆರೆಗಳನ್ನು ಪುನಃಶ್ಚೇತನ ಗೊಳಿಸಿ, ಮಳೆ ನೀರನ್ನು ಶೇಖರಿಸಿ ಉಪಯೋಗಿಸಿಕೊಳ್ಳಲು ಯೋಜನೆ ರೂಪಿಸಲಾಗುತ್ತಿದೆ.

7. ದಿನಂಪ್ರತಿ 70 ದ.ಲ.ಲೀ ಮಲಿನ ನೀರನ್ನು ತೃತೀಯ ದರ್ಜೆಗೆ ಸಂಸ್ಕರಿಸಿ ತೋಟಗಾರಿಕೆ, ನೆಲ ಶುಚಿಗೊಳಿಸಲು ಇತರೆ ಕೆಲಸಗಳಿಗೆ ಉಪಯೋಗಿಸಲು ಜಲಮಂಡಳಿಯ ಸಂಸ್ಕರಣಾ ಘಟಕಗಳಿಂದ ಸರಬರಾಜು ಮಾಡಲಾಗುತ್ತಿರುತ್ತದೆ.

8. ಸೋರಿಕೆಯಿಂದ ಪೋಲಾಗುತ್ತಿರುವ ನೀರನ್ನು ನಿಯಂತ್ರಿಸಲು ವಿವಿಧ ಕ್ರಮಗಳನ್ನು ಕೈಗೊಂಡಿರುತ್ತದೆ.

9) ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಇತರೆ ಮೂಲಗಳಿಂದ ನೀರು ಹರಿಸಿ ಶೇಖರಿಸುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: 186 ಎಂ.

ಎನ್. ಐ. 2009, ಬೆಂಗಳೂರು ದಿನಾಂಕ:25–11–2010ರಲ್ಲಿ ತಜ್ಞರ ಸಮಿತಿಯೊಂದನ್ನು ರೂಪಿಸಿ ಈ ಕೆಳಕಂಡ ಕರ್ತವ್ಯಗಳನ್ನು ಪರಿಶೀಲಿಸಲು ಆದೇಶಿಸಿರುತ್ತದೆ.

ಅ) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ದಡಿಯಲ್ಲಿ ಬರುವ ಪ್ರದೇಶಗಳಿಗೆ ಮುಂದಿನ 40 ವರ್ಷಗಳಿಗೆ (2050) ಬೇಕಾಗುವ ಹೆಚ್ಚಿನ ನೀರು ಸರಬರಾಜು ಮಾಡಲು ಸಂಭಾವ್ಯ ವರದಿ ತಯಾರಿಸುವುದು.

ಆ) ಮುಂದಿನ ಹತ್ತು ವರ್ಷಗಳಿಗೆ ಅಗತ್ಯವಾದ ನೀರನ್ನು ಪೂರೈಸಲು ಬೇಕಾಗುವ ಯೋಜಿತ ಜನಸಂಖ್ಯಾ ಹಗೂ ನಗರದ ಬೆಳವಣಿಗೆ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು.

ಇ) ಎಲ್ಲಾ ಇಲಾಖೆಗಳಿಂದ ಸಂಬಂಧಿಸಿದ ಸಮಂಜಸ ಮಾಹಿತಿಯನ್ನು ಸಂಗ್ರಹಿಸಲು ಸಭೆಯನ್ನು ಆಯೋಜಿಸುವುದು.

ಈ) ನಗರಕ್ಕೆ ಬೇಕಾದ ಹೆಚ್ಚಿನ ನೀರಿನ ಲಭ್ಯತೆ ಬಗ್ಗೆ ಅಂದಾಜು ಮಾಡಲು ಹಾಗೂ ಲಭ್ಯ ನೀರಿನ ಮೂಲಗಳ ಸಂಭವನೀಯ ಉಪಯೋಗವನ್ನು ನಿರ್ಧರಿಸಲು ವಿವಿಧ ಸ್ಥಳಗಳ ಪರಿಶೀಲನೆಗಾಗಿ ಪ್ರಯಾಣ ಮಾಡುವುದು.

ಉ) ವಿವಿಧ ಪರ್ಯಾಯ ಪ್ರಸ್ತಾಪಗಳ ಪ್ರಮುಖ ಹಣಕಾಸು ತೊಡಗಿಸುವಿಕೆ ಹಾಗೂ ಪ್ರಮುಖ ತಾಂತ್ರಿಕ ವಿಷಯಗಳ ತುಲನಾತ್ಮಕ ವಿಶ್ಲೇಷಣೆ.

ಊ) ಮಳೆ ನೀರಿನ ವಿವಿಧ ಉಪಯೋಗಗಳ ಸಾಧ್ಯತೆ, ನೀರಿನ ಸಂರಕ್ಷಣೆ, ಸೋರುವಿಕೆಯಲ್ಲಿ ತಗ್ಗಿಸುವುದು ಹಾಗೂ ಸದ್ಯದ ನೀರಿನ ಉಪಯೋಗಕ್ಕೆ ಯೋಜನೆ ತಯಾರಿಸುವುದು.

ಆ) ನಗರದ ನಾಗರೀಕರಿಗೆ ನೀರಿನ ಬವಣೆ ನೀಗಿಸಲು ತ್ವರಿತ ಪರಿಹಾರವಾಗಿ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿರುತ್ತದೆ.

1. ನಗರದಲ್ಲಿ ಹಾಲಿ ಚಾಲ್ತಿಯಲ್ಲಿದ್ದ 5,962 ವಿದ್ಯುತ್ ಚಾಲಿತ 3818 ಕೈ ಚಾಲಿತ ಯಂತ್ರ ಕೊಳವೆ ಬಾವಿಗಳ ಜೊತೆಗೆ ಹೊಸದಾಗಿ 2,619 ಕೊಳವೆ ಬಾವಿಗಳನ್ನು ಕೊರೆದು ಇವುಗಳಿಂದ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.

2. ನಗರದಲ್ಲಿ ಮುಖ್ಯ ನೀರು ಸರಬರಾಜು ಸ್ಥಾವರಗಳಾದ ಸಿ.ಜೆ.ಎಫ್. ಮಲ್ಲೇಶ್ವರ, ಎಲ್. ಎಲ್. ಆರ್. ರೇಸ್‌ಕೋರ್ಸ್ ರಸ್ತೆ,

ಹೆಗ್ಗನಹಳ್ಳಿ, ಹೊಸಹಳ್ಳಿ ಮತ್ತು ಹೆಚ್. ಜಿ. ಆರ್. ಹೈಗ್ರೌಂಡ್ಸ್ ಸ್ಥಳಗಳಲ್ಲಿ ನೀರು ಸರಬರಾಜು ಅಡಚಣೆ ಇಲ್ಲದೆ ಕಾರ್ಯ ನಿರ್ವಹಿಸಲು ವಿದ್ಯುತ್ ಜನರೇಟರ್‌ಗಳನ್ನು ಅಳವಡಿಸಲಾಗಿದೆ.

3. ನಗರದಲ್ಲಿ 7,477 ಸಾರ್ವಜನಿಕ ಕೊಳಾಯಿಗಳಿದ್ದು ಇವುಗಳಿಂದಲೂ ಸಹ ನಾಗರೀಕರಿಗೆ ನೀರು ಸರಬರಾಜಾಗುತ್ತಿರುತ್ತದೆ.

4. ಮಲಿನ ನೀರನ್ನು ತೃತೀಯ ದರ್ಜೆಗೆ ಸಂಸ್ಕರಿಸಿ ತೋಟಗಾರಿಕೆ, ನೆಲ ಶುಚಿಗೊಳಿಸಲು ಇತರೆ ಕೆಲಸಗಳಿಗೆ ಉಪಯೋಗಿಸಲು ಜಲಮಂಡಳಿಯ ಸಂಸ್ಕರಣಾ ಘಟಕಗಳಿಂದ ಸರಬರಾಜು ಮಾಡಲಾಗುತ್ತಿರುತ್ತದೆ.

5) ಕೊಳವೆ ಬಾವಿಗಳನ್ನು ಸದಾ ಸುಸ್ಥಿತಿಯಲ್ಲಿಡಲು ಖಾಸಗಿ ಸಂಸ್ಥೆಗಳಿಗೆ ಕಾರ್ಯ ನಿರ್ವಹಿಸಿರುತ್ತದೆ.

ಇ) ಮುಂಬರುವ ಬೇಸಿಗೆಯನ್ನು ಗಮನದಲ್ಲಿರಿಸಿಕೊಂಡು, ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಹಾಲಿ ಶೇಖರಣೆ ಇರುವ ನೀರನ್ನು ಮುಂದಿನ ಮುಂಗಾರು ಮಳೆ ಪ್ರಾರಂಭವಾಗುವವರೆಗೂ ಸರಬರಾಜು ಮಾಡಲು ಅತೀ ಜಾಗರೂಕತೆಯಿಂದ ಬಳಸಲಾಗುತ್ತಿದೆ. ಮಹಾಲಕ್ಷ್ಮೀ ಬಡಾವಣೆಗೆ ಕಾವೇರಿ ನೀರನ್ನು 4ನೇ ಹಂತ, 1ನೇ ಘಟ್ಟದ ಯೋಜನೆಯಡಿ ನಿರ್ಮಿಸಿರುವ ಹೆಗ್ಗನಹಳ್ಳಿ ಜಲಾಶಯದಿಂದ ಶ್ರೀಗಂಧ ಕಾವಲ್ ಜಲಾಶಯಕ್ಕೆ ಪಂಪ್ ಮಾಡಿ ತದನಂತರ ಇಲ್ಲಿಂದ ಕೇತಮಾರನಹಳ್ಳಿ ಜಲಾಶಯಕ್ಕೆ ಪಂಪ್ ಮಾಡಿ, ಕೇತಮಾರನ ಹಳ್ಳಿ ಜಲಾಶಯದಿಂದ ನಂದಿನಿ ಬಡಾವಣೆಯಲ್ಲಿರುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಈ) ಇಲ್ಲ.

ಬೆಂಗಳೂರು ಮಹಾನಗರ ಹೊರವಲಯದಲ್ಲಿ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ

64(167) ಶ್ರೀ ನೆ. ಲ. ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರ ಮತ್ತು ಹೊರವಲಯದಲ್ಲಿ ಎಷ್ಟು ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿದೆ (ವಿವರ ನೀಡುವುದು);